ಅನ್ನೋದು ತಿಳೀತಿತ್ತು. ಅದಕ್ಕೆ ನಾನೇ ವಿಶ್ವವಿದ್ಯಾಲಯದಿಂದ ರವಾನೆಯಾಗುತ್ತಿರೋ ಹಾಗೆ ಅಂಕಪಟ್ಟಿಯ ಪ್ರತಿಗಳನ್ನು ರವಾನಿಸುತ್ತಿದ್ದೇನೆ."

"ಹೌದಾ. ಆದರೆ ನೀನೇ ರವಾನಿಸುತ್ತಿದ್ದರೂ ವಿಶ್ವವಿದ್ಯಾಲಯದ ವತಿಯಿಂದ ಹೋಗಿದ್ದು ಅಂತ ಹೇಗೆ ನಂಬಿಕೆ ಹುಟ್ಟಿಸುತ್ತೀಯ?"

"ಇಗೋ ಇಲ್ಲಿದೆ ನನ್ನ ಅಸ್ತ್ರ."

ಅವನು ಪ್ರದರ್ಶಿಸಿದ ಅಸ್ತ್ರ ಒಂದು ಪುಟ್ಟ ಮುದ್ರೆಯಾಗಿತ್ತು. ಆ ಮುದ್ರೆಯ ಮೇಲೆ 'ಇಂದ – ರವಾನೆ ಗುಮಾಸ್ತ... ಠಠಠ ವಿಶ್ವವಿದ್ಯಾಲಯ' ಎನ್ನುವ ಬರಹವಿತ್ತು. "ದೇಶದ ಅತೀ ಕ್ಲಿಷ್ಟ ಸಮಸ್ಯೆಗಳಿಗೆ ಮೂರು ರೂಪಾಯಿಯ ಪರಿಹಾರ!" ಎಂದು ಅವನು ಹೇಳಿದ್ದು ನನ್ನನ್ನು ಆಳವಾಗಿ ತಟ್ಟಿತ್ತು. "ಇದನ್ನು ನಾನು ಲಕೋಟೆಗೆ ಹಾಕಿ ಲಕ್ಕದ ಕೆಂಪು ಬಣ್ಣದ ಮೇಣವನ್ನು ಮೆತ್ತಿ ಮತ್ತೊಂದು ಸೀಲನ್ನು ಹಾಕುತ್ತೇನೆ. ಇದಕ್ಕೆ ಭಾರತ ಸರಕಾರ ನೀಡುವ ಯಾವುದೇ ಪತ್ರಕ್ಕಿಂತ ಹೆಚ್ಚಿನ ಘನತೆ ತಾನಾಗಿಯೇ ಒದಗುತ್ತದೆ."

ಗೆಜೆಟೆಡ್ ಆಫೀಸರಾಗಿ ಕೆಲಸ ಮಾಡುತ್ತಿದ್ದ ನನ್ನ ಅಪ್ಪನೂ, ಅನೇಕ ಟ್ರೂಕಾಪಿಗಳಿಗೆ ದಸ್ತಕತ್ತು ಹಾಕಲು ಒಂದು ಸೀಲನ್ನು ತಯಾರಾಗಿ ತಮ್ಮ ಪೆಟ್ಟಿಗೆಯಲ್ಲಿಟ್ಟಿರುತ್ತಿದ್ದರು. ದಸ್ತಕತ್ತು ಸರಿಯಿಲ್ಲದಿದ್ದರೂ ಸರಿ, ಆದರೆ ಮುದ್ರೆಯ ಘನತೆಗೆ ಕುಂದು ಬರಬಾರದು. ಹಾಗೆ ನೋಡಿದರೆ ನನ್ನ ಹತ್ತನೆಯ ತರಗತಿಯ ಅಂಕಪಟ್ಟಿಯಲ್ಲಿ ಪ್ರಾಂಶುಪಾಲರ ದಸ್ತಕತ್ತೇ ಮುದ್ರೆಯಾಗಿ ಪರಿವರ್ತಿತಗೊಂಡಿತ್ತು. ಕರ್ನಾಟಕ ಪ್ರೌಢ ಶಿಕ್ಷಣಾ ಇಲಾಖೆಯ ಮೊಹರು ಮುದ್ರಿತವಾಗಿತ್ತು! ನನಗೆ ಆಗ ತಿಳಿದು ಬಂದದ್ದೆಂದರೆ ನಮ್ಮ ಪ್ರಾಂಶುಪಾಲರ ದಸ್ತಕತ್ತಿಗೆ ಅಧಿಕಾರದ ಗತ್ತಿತ್ತು. ಹಾಗೂ ಅವರು ತುಂಬಾ ಹೆಚ್ಚಿನ ಕೆಲಸದಲ್ಲಿ ನಿರತರಾಗಿದ್ದರಿಂದ ಅವರ ಕೈಬರಹದ ದಸ್ತಕತ್ತು ಹಾಕಲು ಸಮಯವಿರಲಿಲ್ಲ. ಅಪ್ರೂವಲ್ಲೂ, ಅಥಾರಿಟಿಯೂ ಸೇರಿದ್ದೆಂದರೆ ದಸ್ತಕತ್ತಿನ ಸೀಲು.

ಮುದ್ರೆಗಳಲ್ಲಿ ಒಂದು ಹೈರಾರ್ಕಿಯೂ ಇರುತ್ತದೆನ್ನುವುದನ್ನು ನನ್ನ ಗೆಳೆಯ ಹೇಳಿದ್ದ. ಹೆಸರು ಮತ್ತು ಹುದ್ದೆಯಿರುವ ಸರಳ ಮುದ್ರೆ. ಇದು ಖಾಸಗಿ ಮುದ್ರೆ. ಇದನ್ನು ತಾವೇ ದುಡ್ಡು ಕೊಟ್ಟು ಮಾಡಿಸಿಕೊಂಡಿರುತ್ತಾರಾದ್ದರಿಂದ ಅದಕ್ಕೆ ಘನತೆ ಕಡಿಮೆ. ಆದರೆ ಹೆಸರಿಲ್ಲದೇ ಬರೇ ಹುದ್ದೆಯಿರುವ ಮುದ್ರೆಗೆ ಹೆಚ್ಚಿನ ಘನತೆ. ಅದನ್ನು ಆಫೀಸಿನವರು ತಮ್ಮ ಖರ್ಚಿನಲ್ಲಿ ಮಾಡಿಸಿರುತ್ತಾರಾದ್ದರಿಂದ ಅದು ಅಫಿಷಿಯಲ್. ಆರ್ಥಿಕ ವ್ಯವಹಾರಗಳಲ್ಲಿ ಬಳಸುವ ಚೌಕ ಮುದ್ರೆಗೆ ಅದರ ತೂಕ, ಮತ್ತು ಅದನ್ನು ಗುದ್ದಿದಾಗ ಕಾಗದದ ಮೇಲಾಗುವ ಪ್ರಭಾವ ಅದರ ಹಿರಿಮೆಯನ್ನು ಸೂಚಿಸುತ್ತದೆ. ಹಾಗೂ ಎಲ್ಲಕ್ಕಿಂತ ಘನತೆವೆತ್ತ ಮುದ್ರೆ ರೌಂಡ್ ಸೀಲ್ ಎನ್ನುವ ಚಕ್ರಾಕಾರದ ಮುದ್ರೆ. ಚಕ್ರಾಕಾರದ ಮುದ್ರೆಯಿತ್ತೆಂದರೆ ಅದು ಬಹಳ ಸುರಕ್ಷತೆಯಿಂದ ಕಾಪಿಟ್ಟ, ಕೆಲವೇ ಸಂದರ್ಭಗಳಲ್ಲಿ ಹೊರಬರುವ ಅಮೂಲ್ಯ ಮುದ್ರೆ ಎನ್ನುವುದು ನನಗೆ ತಿಳಿಯಿತು. ಮುದ್ರೆಯೊತ್ತುವ ಯಂತ್ರ ಭಾರವಿದ್ದಷ್ಟೂ ಘನತೆ ಹೆಚ್ಚು. ಹಿಂದೆ ತಾರೀಖುಗಳನ್ನೊಳಗೊಂಡ ಚೌಕ ಮುದ್ರೆಗಳು ಬ್ಯಾಂಕುಗಳಲ್ಲಿ ಕಾಣಸಿಗುತ್ತಿದ್ದುವು. ನಗದು ವಿಭಾಗದಲ್ಲಿದ್ದವರ ಕಲೆಗಳಲ್ಲಿ ಹಣವನ್ನು ಚಕಚಕ ಎಣಿಸುವುದಲ್ಲದೇ, ಸರಿಯಾದ (ಪೈಡ್/ರಿಸೀವ್ಡ್) ಮುದ್ರೆಯನ್ನು ಒತ್ತುವುದೂ ಒಂದು ಮುಖ್ಯ ಕಲೆಯಾಗಿತ್ತು.

ಈ ಮುದ್ರೆಯನ್ನು ಒತ್ತುವುದೂ ಸರಳವಾದ ಮಾತಲ್ಲ. ಹಿಂದಿನ ದಿನಗಳಲ್ಲಿ ಕೆಲವು ದಾಖಲೆಗಳಲ್ಲಿ ಮುದ್ರೆಯೊತ್ತಲು ಒಂದು ನಿರ್ದಿಷ್ಟ ಜಾಗವನ್ನು ಬಿಟ್ಟಿರುತ್ತಿದ್ದರು. ನಾಜೂಕಾಗಿ ಮುದ್ರೆ ಒತ್ತುವವರು ಮುದ್ರೆಯನ್ನು ಸ್ಟಾಂಪ್‌ಪ್ಯಾಡಿನಲ್ಲಿ ಮೂರುಮೂರು ಬಾರಿ ಒತ್ತಿ,